ಸೆಪ್ಟೆಂಬರ್ ತಿಂಗಳುಗಳಲ್ಲಿ ಬೇಡಿಕೆ ಕಡಿಮೆ. ತಹಶೀಲ್ದಾರ್ ಕಛೇರಿ ನುಗ್ಗುವಷ್ಟರಮಟ್ಟಿಗೆ ರೈತರು ರೊಚ್ಚಿಗೆದ್ದಿದ್ದಾರೆಂದರೆ ಇದರ ಪರಿಣಾಮವನ್ನು ತಾವು ಊಹಿಸಬಹುದು. ಆ ಕಾರಣ, ಮಾನ್ಯ ಮಂತ್ರಿಗಳು ಬಂದಿದ್ದಾರೆ. ನಾಳೆ ಮುಗಿಸಿಬಿಡೋಣ. ಯಾರೂ ಮಾತನಾಡುವುದಿಲ್ಲ, ನಾವು ಕೂಡಾ ಇಲಾಖೆ ಮೇಲೆ ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ಇನ್ನು 10 ನಿಮಿಷ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಮಂತ್ರಿಗಳು ಶ್ರೀನಿವಾಸಪುರದಲ್ಲಿ ನಡೆದ ಘಟನೆ ಬಗ್ಗೆ ಹೇಳಿಕೆ ಕೊಡಬೇಕಾಗಿತ್ತು. ಮೊನ್ನೆ ಅವರು ವಿರೋಧ ಪಕ್ಷದವರನ್ನೆಲ್ಲಾ ಕರೆದಿದ್ದರು. ಮತ್ತು ಯಾರು ಯಾರು ತೊಂದರೆಗೆ ಒಳಗಾಗಿದ್ದರೋ ಏಟು ತಿಂದಿದ್ದರೋ ಅವರನ್ನೂ ಕರೆದು ಅವರ ಕಾರ್ಯಾಲಯದಲ್ಲಿ ಮಾತುಕತೆ ನಡೆಸಿದ್ದಾರೆ. ಈ ಬಗ್ಗೆ ಸರ್ಕಾರದ ಕ್ರಮ ಏನು? ಅವರು ಏನು ನಿರ್ಧಾರ ಕೈಗೊಂಡಿದ್ದಾರೆ? ಅದನ್ನು ಈ ಸದನದ ಮುಂದೆ ಹೇಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಈ ಬಗ್ಗೆ ಸರ್ಕಾರದ ಕ್ರಮ ಏನು? ಇವರು ಏನು ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಈ ಸದನದಲ್ಲಿ ಹೇಳಬೇಕು ಎಂದು ತಮ್ಮ ಮೂಲಕ ನಾನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಸಚಿವರು ಈಗ ಒಂದು ಸ್ಟೇಟ್‌ಮೆಂಟ್‌ನ್ನು ಮಾಡುತ್ತಾರೆ.

ಮಂತ್ರಿಗಳಿಂದ ಹೇಳಿಕೆ

ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ನಡೆದ ಘಟನೆ ಬಗ್ಗೆ.

ಶ್ರೀ ಆರ್. ಧರ್ಮಸಿಂಗ್ (ಗೃಹ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಶ್ರೀನಿವಾಸಪುರದಲ್ಲಿ ದಿನಾಂಕ 2-9-91ರಂದು ರೈತರ ಬೇಡಿಕೆಗಳ ಬಗ್ಗೆ ನಡೆದ ಮೆರವಣಿಗೆ ಸಂದರ್ಭದಲ್ಲಿ ಸಂಭವಿಸಿದ ಘಟನೆಗಳ ಬಗ್ಗೆ ನಾನು ಈಗಾಗಲೇ ದಿನಾಂಕ 4-9-91ರಂದು ವಿವರವಾದ ಹೇಳಿಕೆಯನ್ನು ನೀಡಿದ್ದೇನೆ...

ಶ್ರೀ ವಾಟಾಳ್ ನಾಗರಾಜ್ : ಸ್ಟೇಟ್‌ಮೆಂಟ್ ಕಾಪಿ ಇದೆ ಎಂದು ಅಂದುಕೊಂಡಿದ್ದೇವೆ. ಸ್ಟೇಟ್‌ಮೆಂಟ್ ಕಾಪಿಯನ್ನು ನಮಗೆ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಮಾಕ್ ಔಟ್ ಮಾಡಿದ ಹಾಗೆ ಉತ್ತರ ಕೊಡಬಹುದೆಂದು ಭಾವಿಸಿದ್ದೇವೆ.

ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಶ್ರೀನಿವಾಸಪುರದಲ್ಲಿ ದಿನಾಂಕ 2-9-91ರಂದು ರೈತರ ಬೇಡಿಕೆಗಳ ಬಗ್ಗೆ ನಡೆದ ಮೆರವಣಿಗೆ ಸಂದರ್ಭದಲ್ಲಿ ಸಂಭವಿಸಿದ ಘಟನೆಗಳ ಬಗ್ಗೆ ನಾನು ಈಗಾಗಲೇ ದಿನಾಂಕ 4-9-91ರಂದು ವಿವರವಾದ ಹೇಳಿಕೆಯನ್ನು ನೀಡಿದ್ದೇನೆ.

ಆ ದಿನ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದ ತೀವ್ರ ಅಭಿಪ್ರಾಯಗಳನ್ನು ಗಮನಿಸಿದ್ದೇನೆ. ಅದೇ ದಿನ ಸ್ಥಳ ಪರಿಶೀಲನೆಗೆ ಪೋಲೀಸ್ ಇಲಾಖಾ ಮುಖ್ಯಸ್ಥರಾದ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರ್ದೇಶಕರಾದ ಶ್ರೀ ಬಾಲಕೃಷ್ಣರಾವ್‌ರವರನ್ನು ಕಳುಹಿಸಿದ್ದೆ. ಅವರು ಸಹ ಸ್ಥಳ ತನಿಖೆ ಮಾಡಿ ತಮ್ಮ ವರದಿಯನ್ನು ಸರ್ಕಾರಕ್ಕೆ ಕಲುಹಿಸಿದ್ದಾರೆ. ಅಲ್ಲದೆ ಮೇಲ್ಮನೆಯಲ್ಲೂ ಸಹ ಈ ವಿಚಾರ ಪ್ರಸ್ತಾಪಿಸಲ್ಪಟ್ಟು ಅಲ್ಲಿಯೂ ಸಹ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರೆ ಮಾನ್ಯ ಸದಸ್ಯರುಗಳು ತುಂಬಾ ತೀವ್ರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಈ ಮಧ್ಯೆ ಜಿಲ್ಲಾ ಮಂತ್ರಿಗಳು ಮತ್ತು ರಾಜ್ಯ ರೇಷ್ಮೆ ಇಲಾಖೆಯ ರಾಜ್ಯ ಸಚಿವರಾದ ಶ್ರೀ ಮುನಿಯಪ್ಪನವರು ಸ್ಥಳಕ್ಕೆ ಭೇಟಿ ಕೊಟ್ಟು ಸ್ಥಳೀಯ ಮುಖಂಡರುಗಳನ್ನು ಹಾಗೂ ಶಾಸಕರುಗಳನ್ನು ಬೇಟಿ ಆಗಿದ್ದರು. ದಿನಾಂಕ 9-9-91 ರಂದು ಕಳೆದ ಸೋಮವಾರ ಈ ಗಲಭೆಯಲ್ಲಿ ನೊಂದ ರೈತ ಮುಖಂಡರು ಮತ್ತು ಸ್ಥಳೀಯ ಮುಖಂಡರುಗಳು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ತಮಗೆ ಆದ ನೋವು ಮತ್ತು ಅನ್ಯಾಯದ ಬಗ್ಗೆ ವಿವರಿಸಿದರು. ಮಾನ್ಯ ಮುಖ್ಯ ಮಂತ್ರಿಯವರು ಸಹ ಇವರ ವಿಚಾರಗಳನ್ನು ಸಹಾನುಭೂತಿಯಿಂದ ತಿಳಿದುಕೊಂಡು, ನಾನು ಈ ವಿಚಾರವನ್ನು ಖುದ್ದಾಗಿ ಪರಿಶೀಲಿಸುವಂತೆ ತಿಳಿಸಿದರು. ಅದೇ ದಿನ ನಾನು ನನ್ನ ಕೊಠಡಿಯಲ್ಲಿ ಮುಕ್ತ ಚರ್ಚೆಗೆ ಅವಕಾಶವಾಗುವಂತೆ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರು, ಉಪ-ನಾಯಕರು, ಮತ್ತು ವಿರೋಧ ಪಕ್ಷದ ಸದಸ್ಯರಾದ ಮಾನ್ಯ ಶ್ರೀ ವಾಟಾಳ್ ನಾಗರಾಜ್, ಶ್ರೀ ಬೈರೇಗೌಡ ಹಾಗೂ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರುಗಳಾದ ಶ್ರೀ ಸುದರ್ಶನ್, ಶ್ರೀ ಮೋಹಿದ್ದೀನ್ ಇವರುಗಳನ್ನು ಆಹ್ವಾನಿಸಿದ್ದೆ. ಈ ಸಭೆಗೆ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ಶ್ರೀ ವಾಟಾಳ್ ನಾಗರಾಜ್‌ರವರು ಶ್ರೀ ಸಿ. ಬೈರೇಗೌಡರವರು, ಶ್ರೀ ವೆಂಕಟಶಿವಾರೆಡ್ಡಿಯವರು, ವಿಧಾನ ಪರಿಷತ್ ಸದಸ್ಯರಾದ ಶ್ರೀ ಸುದರ್ಶನ್, ಶ್ರೀ ಪಿಳ್ಳಪ್ಪ, ಶ್ರೀ ಮೊಹಿದ್ದೀನ್ ಇವರುಗಳು ನನ್ನ ವಿನಂತಿಯನ್ನು ಮನ್ನಿಸಿ ಸಭೆಯಲ್ಲಿ ಭಾಗವಹಿಸಿದ್ದರು. ಇದೇ ಸಭೆಯಲ್ಲಿ ಮಾಜಿ ಶಾಸಕ ಶ್ರೀ ರಮೇಶ್ ಕುಮಾರ್‌ರವರು ಸಹ ಭಾಗವಹಿಸಿದ್ದರು. ಈ ಸಭೆಗೆ ಈ ಘಟನೆಗಳಲ್ಲಿ ಪೋಲೀಸ್ ಲಾಠಿ ಪ್ರಹಾರದಿಂದ ಗಾಯಗೊಂಡಿದ್ದ ಪಿ.ಎಲ್.ಡಿ. ಬ್ಯಾಂಕ್‌ನ ಮಾಜಿ ಅಧ್ಯಕ್ಷರಾಗಿದ್ದ ಶ್ರೀ ಬಿ.ಎನ್. ಶ್ರೀನಿವಾಸರೆಡ್ಡಿ, ಹಾಲೂ ಮಾರಾಟಗಾರರ ಸಂಘದ ಮಾಜಿ ಅಧ್ಯಕ್ಷರಾಗಿದ್ದ ಶ್ರೀವೆಂಕಟಶಿವಾರೆಡ್ಡಿ ತಾಲ್ಲೂಕು ಜನತಾ ದಳದ ಅಧ್ಯಕ್ಷರಾದ ಶ್ರೀ ಬಿ. ವೆಂಕಟರಮಣ ರೆಡ್ಡಿ, ರೋಣೂರು ಮಂಡಲ್ ಉಪ-ಪ್ರಧಾನರಾದ ಶ್ರೀ ಶಿವರಾಮ್ ಶರ್ಮ, ತಿಮ್ಮಸಂದ್ರ ಮಂಡಲ್ ಉಪ-ಪ್ರಧಾನರಾದ ಶ್ರೀ ಅಯ್ಯಪ್ಪ ಕೂಲಗುರ್ಕಿ ಮಂಡಲ್ ಸದಸ್ಯ ಶ್ರೀ ಕೆ.ಸಿ. ವೆಂಕಟಸ್ವಾಮಿ, ಕೂಚಸಂದ್ರ ರೈತರಾದ ಶ್ರೀ ಎಸ್. ವೆಂಕಟಸ್ವಾಮಿ, ರೋಣೂರು ಮಂಡಲ್ ಪ್ರಧಾನ ಶ್ರೀ ನಾರಾಯಣ ಸ್ವಾಮಿ, ಹಾಲುವಟ್ಟ ಮಾಜಿ ಪಿ.ಎಲ್..ಡಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಎನ್. ಶ್ರೀರಾಮರೆಡ್ಡಿ, ಎ. ಕುಟ್ಟೂರು ಗ್ರಾಮದ ಜಿಲ್ಲಾ ಪರಿಷತ್ ಸದಸ್ಯ ಶ್ರೀ ಕೆ.ಎಸ್. ರೆಡ್ಡಪ್ಪ, ಸೋಮಯಾಜಲಪಳ್ಳಿ ಕುಮಾರ್ , ಪ್ರಿಂಟರ್ಸ್‌ನ ಶ್ರೀ ಎ.ಎನ್. ಸುಬ್ಬರಾವ್ ಇವರು ಸಹ ಹಾಜರಿದ್ದು ತಮಗೆ ಆದ ಅನ್ಯಾಯ ಮತ್ತು ದೌರ್ಜನ್ಯದ ಬಗ್ಗೆ ನೊಂದು ವಿವರಿಸಿದರು.

ಈ ಸಭೆಯಲ್ಲಿ ಪೋಲೀಸ್ ಮಹಾ ನಿರ್ದೇಶಕ ಶ್ರೀ ಕೆ.ಯು. ಬಾಲಕೃಷ್ಣರಾವ್ ಹಾಗೂ ಗೃಹ ಕಾರ್ಯದರ್ಶಿ ಅಧೀಪ್ ಚೌಧರಿಯವರು ಸಹ ಹಾಜರಿದ್ದರು.

ರೈತ ಮುಖಂಡ ನಾಯಕರುಗಳ ವಿವರಗಳನ್ನು ಕೇಳಿದ ಮೇಲೆ ಹಾಜರಿದ್ದ ಮಾನ್ಯ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳು ತೀವ್ರ ಆತಂಕ ವ್ಯಕ್ತಪಡಿಸಿ, ಘಟನಾವಳಿಗಳ ಬಗ್ಗೆ ಸತ್ಯವಾದ ವಿಚಾರಗಳನ್ನು ತಿಳಿದುಕೊಳ್ಳಲು ಅಗತ್ಯವಾದ ನಿಷ್ಪಕ್ಷಪಾತವಾದ ತನಿಖೆ ಶೀಘ್ರವಾಗಿ ನಡೆದು ತಪ್ಪಿತಸ್ಥರಿಗೆ ಅಗತ್ಯವಾದ ಶಿಕ್ಷೆ ವಿಧಿಸಬೇಕೆಂದು ಆಗ್ರಹ ಪಡಿಸಿದರು. ನೊಂದ ರೈತರು ಮತ್ತು ಮಾನ್ಯ ಸದಸ್ಯರು ಪೋಲೀಸರ ಕಾರ್ಯಾಚರಣೆ ಇನ್ನೂ ಸಂಯಮದಿಂದ ಇರಬೇಕಾಗಿತ್ತೆಂದು ಅಭಿಪ್ರಾಯ ಪಟ್ಟರು. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಮತ್ತು ಡಿ.ವೈ.ಎಸ್.ಪಿ. ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಇವರುಗಳು ಇತ್ತೀಚಿಗೆ ವರ್ಗವಾಗಿ ಇಲ್ಲಿಗೆ ಬಂದವರಾಗಿರುವುದರಿಂದು ಶ್ರೀನಿವಾಸಪುರದ ಬಗ್ಗೆ ಹೊಸಬರಾಗಿದ್ದು ಘಟನೆಯ ಬಗ್ಗೆ

ಸ್ಥಳೀಯ ಹೆಡ್ ಕಾನ್‌ಸ್ಟೇಬಲ್ ಪಿ.ಸಿ. ಚೌಡಪ್ಪನವರು ಉದ್ರೇಕಕರವಾದ ಮಾಹಿತಿಗಳನ್ನು ಮೇಲಾಧಿಕಾರಿಗಳಿಗೆ ಒದಗಿಸಿದ್ದರಿಂದ ಪರಿಸ್ಥಿತಿ ತೀವ್ರತರಗೊಂಡಿತೆಂದು ಶ್ರೀ ರಮೇಶ್ ಕುಮಾರ್‌ರವರು ಅಭಿಪ್ರಾಯ ಪಟ್ಟರು.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಗುಂಪು ವಿದ್ಯುಚ್ಛಕ್ತಿ ಇಲಾಖೆಯ ಕಚೇರಿಗೆ ತೆರಳಿ ಮನವಿ ಕೊಟ್ಟು, ತಾಲ್ಲೂಕು ಕಚೇರಿಗೆ ಬರುವವರೆಗೂ ಶಾಂತವಾಗಿದ್ದದ್ದು, ತಾಲ್ಲೂಕು ಕಚೇರಿಗೆ ತಲುಪಿದನಂತರ ತಹಶೀಲ್ದಾರರ ಕೊಠಡಿಗೆ ನುಗ್ಗಿ ಉದ್ರೇಕಗೊಂಡದ್ದು. ಈ ಉದ್ರೇಕಕ್ಕೆ ತಹಶೀಲ್ದಾರ್‌ರವರು ಕೈಗೊಂಡಿದ್ದ ಕೆಲವು ನಿರ್ಣಯಗಳು ಕೆಲವರಿಗೆ ತೃಪ್ತಿಕರವಾಗಿಲ್ಲದಿದ್ದುದ್ದು ಎಂದು ಇತ್ತೀಚಿನ ವರದಿಗಳಿಂದ ತಿಳಿದುಬಂದಿದೆ. ಮಾನ್ಯ ಅಧ್ಯಕ್ಷರೇ, ಈ ಘಟನೆ ನಡೆದದ್ದು ದುರದೃಷ್ಟಕರ. ತಮಗೂ ತಿಳಿದಿರುವಂತೆ, ಇಂತಹ ಸಂದರ್ಭಗಳಲ್ಲಿ ಸಮಾಜಘಾತುಕ ವ್ಯಕ್ತಿಗಳು ಪರಿಸ್ಥಿತಿಯ ದುರ್ಲಾಭ ಪಡೆಯಲು ಹವಣಿಸುತ್ತಿರುತ್ತದೆ. ವಿಧಾನ ಸಭೆಯ ಮತ್ತು ವಿಧಾನ ಪರಿಷತ್‌ನ ಮಾನ್ಯ ಸದಸ್ಯರುಗಳ ಅಭಿಪ್ರಾಯಗಳನ್ನು ಗಮನದಲ್ಲಿಕೊಂಡು, ತನಿಖೆ ಶೀಘ್ರವಾಗಿಯೂ, ನಿಷ್ಪಕ್ಷಪಾತವಾಗಿಯೂ ನಡೆಯಲು ಅನುಕೂಲವಾಗುವಂತೆ, ಈ ಘಟನೆಯಲ್ಲಿ ಮುಖ್ಯರೆಂದು ಹೇಳಲಾದ ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಹೆಡ್ ಕಾನ್‌ಸ್ಟೆಬಲ್ ಇವರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬೇರೆ ಕಡೆಗೆ ವರ್ಗ ಮಾಡಲಾಗಿದೆ. ಈಗಾಲೇ ಆಜ್ಞೆ ಮಾಡಿರುವಂತೆ, ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಶೀಘ್ರವಾಗಿ ನಡೆದು, ತನಿಖಾ ವರದಿಯನ್ನಾಧರಿಸಿ, ತಪ್ಪಿತಸ್ಥರು ಯಾರೇ ಇರಲಿ, ಎಷ್ಟೇ ದೊಡ್ಡವರಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಸರ್ಕಾರ ಹಿಂದು ಮುಂದು ನೋಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಇಲ್ಲಿ ಗಂಟೆಗಟ್ಟಲೆ, ದಿವಸಗಟ್ಟಲೆ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಬೇಕಾಗಿತ್ತು. ಆದರೆ, ಇವತ್ತು ರೈತರ ಮೇಲೆ, ವಿರೋಧ ಪಕ್ಷದ ನಾಯಕರುಗಳ ಮೇಲೆ ಹಲ್ಲೆ ಮಾಡಿದಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ಅವರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಾ? ಇದು ಬೇಜವಾಬ್ದಾರಿ ಸರ್ಕಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಲ್ಲಿನ ಡಿವೈಎಸ್‌ಪಿ, ಸಬ್ ಇನ್ಸ್‌ಪೆಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಅವರನ್ನು ವಜಾ ಮಾಡಬೇಕಾಗುತ್ತು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸಂಬಂಧಪಟ್ಟ ಅಧಿಕಾರಿಗಳನ್ನು ವಜಾ ಮಾಡಬೇಕಾಗಿತ್ತು. ನಮಗೆ ಮಾನ್ಯ ಧರ್ಮಸಿಂಗ್‌ರವರ ಬಗ್ಗೆ ಅಪಾರ ಗೌರವವಿದೆ. ಆದರೆ ಅವರು ಈ ಬಗ್ಗೆ ಇಂಥ ಒಂದು ಹೇಳಿಕೆಯನ್ನು ಕೊಡುತ್ತಾರೆ ಎಂದು ನಾವು ನಂಬಿರಲಿಲ್ಲ. ಜನರ ಮೈಮೇಲೆ, ಹೊಟ್ಟೆಗೆ, ಬೆನ್ನಿಗೆ ಬೂಟ್ಸ್‌ನಲ್ಲಿ ಒದ್ದಿದ್ದಾರೆ, ಇದು ಸರಿಯಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸರಕಾರಕ್ಕೆ ರೈತರ ಬಗ್ಗೆ ಕಳಕಳಿ ಇಲ್ಲ. ವಿರೋಧಿ ಪಕ್ಷದ ನಾಯಕರುಗಳ ಮೇಲೆ ಅಧಿಕಾರಿಗಳು ಹಲ್ಲೆ ಮಾಡಿದ್ದಾರೆ. ಈ ಅಧಿಕಾರಿಗಳನ್ನು ರಕ್ಷಣೆ ಮಾಡಲು ಹೊರಟ ಸರಕಾರದ ಕ್ರಮವನ್ನು, ಸರಕಾರದ ನೀತಿಯನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಸಚಿವರ ಮೇಲೆ ವೈಯಕ್ತಿಕವಾಗಿ ನಮ್ಮ ಆರೋಪ ಇಲ್ಲ. ಆದರೆ ಅವರು ಕೊಟ್ಟ ಹೇಳಿಕೆಯು ಅವರ ಹೃದಯ ಬಿಚ್ಚಿ ಮಾಡಿರತಕ್ಕಂಥಾದ್ದು ಅಲ್ಲ. ಅವರ ಕಾರ್ಯಾಲಯದಲ್ಲಿ ಯಾರ್ಯಾರು ಏಟು ತಿಂದರು, ಯಾರ್ಯಾರು ಒದೆ ತಿಂದರು, ಯಾರ್ಯಾರು ಪೋಲೀಸರಿಂದ ತೊಂದರೆಗೆ ಈಡಾಗಿದ್ದಾರೆ, ಅವರನ್ನು ಕೂಡಾ ಸಚಿವರು ನೋಡಿದ್ದಾರೆ. ಅಂಥವರನ್ನು ನೋಡಿದ ಮೇಲೆ ಸಚಿವರು ಮರುಕದಿಂದ, ಕರುಣೆಯಿಂದ ಇಂಥ ಅಪರಾಧ ಆಗಬಾರದಿತ್ತು ಎಂದು ಹೇಳಿದ್ದಾರೆ. ಅವರ ಮನಸ್ಸಿಗೆ ಕೂಡ ನೋವು ಆಗಿದೆ. ಇದು ಅಪರಾಧವಾಗಿದೆ ಎಂಬರ್ಥದಲ್ಲಿ ಹೇಳಿದ್ದಾರೆ. ಅವರ ಹೇಳಿಕೆಯಲ್ಲಿ ತಪ್ಪಿತಸ್ಥರಿಗೆ ರಕ್ಷಣೆ ಕೊಡುವಂಥಾದ್ದಾಗಿದೆ. ಈಗ ಶ್ರೀನಿವಾಸಪುರ ಇಡೀ ಪೋಲೀಸ್ ರಾಜ್ಯವಾಗಿದೆ. ಅಲ್ಲಿ ಒಂದು ರೀತಿಯಲ್ಲಿ ತುರ್ತುಪರಿಸ್ಥಿತಿಯು ಘೋಷಣೆ ಮಾಡಿದ ಹಾಗೆ ಆಗಿದೆ..

(ಗೊಂದಲ)

ಉಪಾಧ್ಯಕ್ಷಣೆಯವರು : ಮಾನ್ಯ ಸಚಿವರು ಏನೋ ಹೇಳುತ್ತಿದ್ದಾರೆ, ದಯವಿಟ್ಟು ಕೇಳಿ..

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಸರಕಾರವು ಪೋಲೀಸರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ರೀತಿಯಾಗಿ ಪೋಲೀಸ್ ಅಧಿಕಾರಿಗಳನ್ನು ರಕ್ಷಣೆ ಮಾಡುವುದಕ್ಕೆ ಹೊರಟಿರತಕ್ಕಂಥ ಸರಕಾರದ ನೀತಿಯ ವಿರುದ್ಧವಾಗಿ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ನಾವು ಇದನ್ನು ಪ್ರತಿಭಟಿಸಿ ವಾಕ್‌ಔಟ್ ಮಾಡಬೇಕಾಗುತ್ತದೆ. ಇದನ್ನು ಬಿಟ್ಟು ಬೇರೆ ದಾರಿ ಇಲ್ಲ. ಸರಕಾರದವರು ಈ ರೀತಿಯ ಬೇಜವಾಬ್ದಾರಿ ಹೇಳಿಕೆಯನ್ನು ಕೊಡುವುದು ಸರಿಯಲ್ಲ. ಸರಕಾರದ ನೀತಿಯನ್ನು ಪ್ರತಿಭಟಿಸಿ ನಾವು ವಾಕ್‌ಔಟ್ ಮಾಡುತ್ತೇವೆ.

(ಮಾನ್ಯ ಬಿಜೆಪಿಯ ಸದಸ್ಯರುಗಳು ಪ್ರತಿಭಟನಾ ಘೋಷಣೆ ಕೂಗುತ್ತಾ ಸದನದ ಹೊರಗೆ ನಡೆದರು)

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಯ ಡಿವೈಎಸ್‌ಪಿ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರನ್ನು ವಜಾ ಮಾಡಬೇಕು. ಶ್ರೀನಿವಾಸಪುರದಲ್ಲಿನ ಪೋಲೀಸ್ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ರೈತರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಕಾರ ಮನಗಾಣಬೇಕು. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ರೈತರ ಮೇಲೆ ನಡೆದಿರತಕ್ಕಂಥ ಈ ಘಟನೆಯನ್ನು ಪ್ರತಿಭಟಿಸುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್‌ನಾಗರಾಜ್‌ರವರು ಮತ್ತು ಶ್ರೀ ಎಂ.ಪಿ. ವೆಂಕಟೇಶ್‌ರವರು ಸದನದ ಹೊರಗೆ ನಡೆದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಆವೊತ್ತು ಸಭೆಯಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಆದಾಗ, ಮಾನ್ಯ ಗೃಹ ಸಚಿವರು ತಕ್ಷಣ, ವಿರೋಧಿ ಪಕ್ಷದವರನ್ನು ಮತ್ತು ಅಧಿಕಾರಿಗಳನ್ನು ಕರೆಸಿ ಮಾತನಾಡುತ್ತೇನೆ, ಎಂದು ಹೇಳಿದ್ದರು. ಮತ್ತೆ ಯಾರು ಗಾಯಾಳುಗಳು ಇದ್ದರು, ಅವರನ್ನು ಕೂಡ ಕರೆಸಿ ಭೇಟಿ ಮಾಡಿ ಮಾತನಾಡುತ್ತೇನೆ ಎಂದು ಹೇಳಿದ್ದರು. ಆ ಒಂದು ಭರವಸೆಯನ್ನು ಅವರು ಸಚಿವೆ ಕೊಟ್ಟಿದ್ದರು. ಅಂತೆಯೇ ತತ್‌ಕ್ಷಣವೇ ಆ ಕೆಲಸವನ್ನು ಕೂಡ ಮಾಡಿದ್ದರು. ಆಗ ನಾವೆಲ್ಲರೂ ಏನೊಂದು ಅಭಿಪ್ರಾಯಕ್ಕೆ ಬಂದಿದ್ದೆವು ಅಂದರೆ, ಮಾನ್ಯ ಗೃಹಸಚಿವರು ಸ್ವತಃ ರೈತರ ಮೇಲೆ ಮತ್ತು ದೌರ್ಜನ್ಯಕ್ಕೆ ಒಳಗಾದ ಜನರು ಯಾರಿದ್ದಾರೆ, ಅವರ ಮೇಲೆ

ಆಗಿದ್ದಂಥ ಬಾಸುಂಡೆ ಮತ್ತು ಆಗಿದ್ದಂಥ ಪ್ರಹಾರಗಳನ್ನು ನೋಡಿದ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಾವು ಅಂದುಕೊಂಡಿದ್ದೆವು. ಆದರೆ ಹಾಗೆ ಆಗಿಲ್ಲ, ಅವರು ಕೊಟ್ಟ ಪೇಳಿಕೆಯಲ್ಲಿ ಬಾಕಿ ಎಲ್ಲಾ ಸರಿಯಾಗಿದೆ. ಆದರೆ ತಪ್ಪಿತಸ್ಥರಿಗೆ ಏನಾದರೂ ಶಿಕ್ಷೆ ಕೊಡಬೇಕೆನ್ನುವ ವಿಚಾರದಲ್ಲಿ ಯಾರೋ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಇಬ್ಬರು ಕಾನ್ಸ್‌ಟೆಬಲ್‌ಗಳನ್ನು ವರ್ಗಾವಣೆ ಮಾಡಿದ್ದೇವೆಂದು ಹೇಳಿದ್ದಾರೆ. Transfer is not a punishment at all.

ಅಲ್ಲಿನ ಎಸ್‌ಐ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಡಿವೈಎಸ್‌ಪಿ ಮೇಲೂ ಏನೂ ಕ್ರಮ ತೆಗೆದುಕೊಂಡಿಲ್ಲ. ಕೇವಲ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಇಬ್ಬರು ಪೇದೆಗಳನ್ನು ಮಾತ್ರ ವರ್ಗಾವಣೆ ಮಾಡಿದ್ದಾರೆ. ಇದೇನು ಕ್ರಮ? ಬಹುಶಃ ಅವರನ್ನು ಕೂಡ ವರ್ಗಾವಣೆ ಮಾಡಿ ಒಳ್ಳೆಯ ಜಾಗಕ್ಕೆ ಹಾಕಿರಬಹುದು, ಫುಡ್‌ಸೆಲ್‌ಗೋ, ಫಾರೆಸ್ಟ್‌ಸೆಲ್‌ಗೋ ಹಾಕಿರಬಹುದು. ಒಟ್ಟಿನಲ್ಲಿ ಒಳ್ಳೆಯ ಜಾಗಕ್ಕೆ ಹಾಕಿರಬಹುದು. ಇದ್ದುದಕ್ಕಿಂತ ಒಳ್ಳೆಯ ಜಾಗಕ್ಕೆ ಹಾಕಿರಬಹುದು. ತಾವುಗಳು ಮೆಜಿಸ್ಟೀರಿಯಲ್ ಎನ್‌ಕ್ವಾಯಿರಿ ಮಾಡುತ್ತೇವೆಂದು ಆವೊತ್ತೇ ಹೇಳಿದ್ದೀರಿ. ಆದರೆ ಅಂದೇ ತಮ್ಮ ಬಾಯಿಂದ ಇಲ್ಲ, ಇಂಥವರನ್ನು ಟ್ರಾನ್ಸ್‌ಫರ್ ಮಾಡುತ್ತೇವೆ ಎಂದು ಹೇಳಿದಿದ್ದರೆ ಈಗ ಇಲ್ಲಿ ನಾವು ಕೇಳುವ ಪ್ರಶ್ನೆಯೇ ಬರುತ್ತಿರಲಿಲ್ಲ. ನಮ್ಮ ಹೋರಾಟ ಈ ಕುರಿತಾಗಿ ಏನೆಂದರೆ, ಯಾರು ತಪ್ಪಿತಸ್ತ ಅಧಿಕಾರಿ ಇದ್ದಾರೆ ಅವರಿಗೆ ಸೂಕ್ತ ಶಿಕ್ಷೆ ಆಗಬೇಕು. ಅಧಿಕಾರದಲ್ಲಿ ಇವೊತ್ತು ನೀವು ಇರಬಹುದು, ನಾಳೆ ನಾವು ಬರಬಹುದು, ಮತ್ತೊಬ್ಬರು ಬರಬಹುದು. ಇದರಲ್ಲಿ ಇರುವ ಪ್ರಶ್ನೆ ಏನೆಂದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರಿಗಳು ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಘಟನೆಯನ್ನು ಜಿಲ್ಲಾ ಮಂತ್ರಿಗಳಾದ ಶ್ರೀ ಮುನಿಯಪ್ಪನವರು ಕೂಡ ನೋಡಿಕೊಂಡು ಬಂದಿದ್ದಾರೆ.

ಪತ್ರಿಕಾ ಹೇಳಿಕೆಯಲ್ಲಿ ಅವರೇ ಹೇಳಿದ್ದಾರೆ. ದೌರ್ಜನ್ಯವಾದುದು ಹೌದು ಎಂದು ಅವರು ಕೂಡ ಹೇಳಿದ್ದಾರೆ. ಇಷ್ಟೆಲ್ಲಾ ದೌರ್ಜನ್ಯ ಆದಮೇಲೆಯೂ ಕೂಡ ಹೀಗೆ ಇದ್ದರೆ ಸರಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದಾಗ ಅಂದರೆ ಏನು? ಟ್ರಾನ್ಸ್‌ಫರ್ ಮಾಡುತ್ತೇವೆಂದರೆ ಏನು ಕ್ರಮ ಆದಂಗೆ ಆಗುತ್ತದೆ. ಇವೊತ್ತು ನಿಮ್ಮ ಹೇಳಿಕೆಯ ಪ್ರಕಾರ ಟ್ರಾನ್ಸ್‌ಫರ್‌ನಿಂದ ಏನೂ ಉಪಯೋಗವಾಗುವುದಿಲ್ಲ. ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ನೀವು ತೆಗೆದುಕೊಳ್ಳಲಿರುವ ಕ್ರಮದಿಂದ ಭಯ ಬರಬೇಕು. ನಿಮ್ಮ ಮಾತುಗಳನ್ನು ಅವರು ಕೇಳುವ ಹಾಗೆ ಇರಬೇಕು. ರೈತರಿಗೆ ಅನುಕೂಲವಾಗಬೇಕು. ಜನಸಾಮಾನ್ಯರ ಮೇಲಿನ ದೌರ್ಜನ್ಯ ನಿಲ್ಲಬೇಕೆಂದರೆ ಕೊನೆಯ ಪಕ್ಷ ಅವರನ್ನು ಸಸ್‌ಪೆನ್‌ಶನ್‌ನಲ್ಲಿ ಇಡಿ. ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದ್ದೀರಿ, ಅದರಿಂದ ಏನು ಉಪಯೋಗ? ನಾವುಗಳು ಜ್ಯೂಡೀಶಿಯಲ್ ಎನ್‌ಕ್ವಾಯರಿ ಮಾಡಿ ಎಂದು ಕೇಳಿಕೊಂಡಿದ್ದಕ್ಕೆ ತಮ್ಮ ಕಡೆಯಿಂದ ಉತ್ತರ ಇಲ್ಲ. ಆದುದರಿಂದ ನಿಮ್ಮ ಈ ತೀರ್ಮಾನವು ನಮಗೆ ಅಸಮಧಾನವನ್ನು ತಂದಿದೆ. ಆದುದರಿಂದ ತಾವುಗಳು ದಯಮಾಡಿ ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರನ್ನು ಸಸ್ಪೆನ್‌ಶನ್‌ನಲ್ಲಿ ಇಡಿ. ಈ ಕಾರ್ಯ ಆದ ಮೇಲೆ ವಿಚಾರಣೆ ಮತ್ತಿತರ ವಿಚಾರಗಳನ್ನು ಮಾಡಬಹುದು. ಅವನ್ನು ಬಿಟ್ಟು ಟ್ರಾನ್ಸ್‌ಫರ್ ಮಾಡಿದ್ದೇವೆ, ಮತ್ತೊಂದು ಮಾಡಿದ್ದೇವೆ ಅಂದರೆ ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಾರೆ ಗೊತ್ತೆ? ನನ್ನನ್ನು ಸಸ್ಪೆಂಡ್ ಮಾಡುತ್ತಾರೋ? ನೋಡಿ, ನಾನು ಅದೇ ಜಾಗಕ್ಕೆ ಪುನಃ ಬರುತ್ತೇನೆ ಎಂದು ಹೇಳುತ್ತಾನೆ. ಒಂದಿಷ್ಟು ದಿನಗಳ ಕಾಲ ರಜೆ ಹಾಕಿ ವಿಧಾನಸೌಧದ ಸುತ್ತ ಮುತ್ತು ತಿರುಗಾಡಿಕೊಂಡು

ಯಾರನ್ನಾದರೂ ಹಿಡಿದು ಕೆಲಸ ಮಾಡಿಸಿಕೊಂಡು ಆರು ತಿಂಗಳುಗಳ ನಂತರ ಅದೇ ಜಾಗಕ್ಕೆ ಹಿಂದಿರುಗಿ ಬರುತ್ತಾನೆ. ಆಗ ಅಲ್ಲಿಯ ಜನರ ಪರಿಸ್ಥಿತಿಯು ಏನಾಗಬೇಕು? ಆದುದರಿಂದ ತಾವುಗಳು ಮಾಡುವ ಟ್ರಾನ್ಸ್‌ಫರ್ ಪನಿಶ್‌ಮೆಂಟ್

ಆಗಲಾರದು. ಅಂತೆಯೇ ಅಂಥ ಅಧಿಕಾರಿಗಳಿಗೆ ತಾವುಗಳು ಪ್ರಮೋಶನ್ ಕೂಡ ಕೊಡುವ ಚಾನ್ಸ್‌ಸ್ ಇರಬಹುದು. ಆದ್ದರಿಂದ ಈ ಬಗ್ಗೆ ತಾವುಗಳು ಮರುಪರಿಶೀಲನೆ ಮಾಡಬೇಕು. ಯಾವುದೇ ಕಾರಣದಿಂದಲೂ ಕೂಡ ಈ ತಪ್ಪಿತಸ್ಥ ಅಧಿಕಾರಿಗಳು ಯಾರಿದ್ದಾರೆ, ಯಾರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ, ಅವರನ್ನು ಫ್ರೀಯಾಗಿ ಬಿಡುತ್ತಾರೆ ಎಂಬ ಭಾವನೆ ಯಾರಲ್ಲಿಯೂ ಸಹಿತ ಇರಬಾರದು. ಆದ್ದರಿಂದ ತಪ್ಪಿತಸ್ಥ ಅಧಿಕಾರಿಗಳನ್ನು ತಾವುಗಳು ತತ್‌ಕ್ಷಣ ಸಸ್ಪೆಂಡ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಚ್. ವಿಕಾಂತಯ್ಯ : ಮಾನ್ಯ ಅಧ್ಯಕ್ಷಣೀಯವರೆ...

ಉಪಾಧ್ಯಕ್ಷಣೆಯವರು : ಸಚಿವರು ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದ್ದಾರೆ.

ಶ್ರೀ ಎಚ್. ವಿಕಾಂತಯ್ಯ : ಇಲ್ಲಿ ಮುಖ್ಯವಾದಂಥ ಆರೋಪಿಗಳು ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೆಬಲ್‌ಗಳು ಅಲ್ಲ, ಅಲ್ಲಿನ ಡಿವೈಎಸ್‌ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಮತ್ತು ಎಲ್ಲರ ಮೇಲೂ ನೇರವಾದಂಥ ಆರೋಪವನ್ನು ಸಂಬಂಧಪಟ್ಟವರು ಮಾಡಿದ್ದಾರೆ. ಮೇಲ್ನೋಟಕ್ಕೆ ತಮಗೆ ನಿಜ ಎಂದು ಕಂಡು ಬಂದಿದ್ದರೆ, ತಾವುಗಳು ಕೆಲವರ ಮೇಲೆ ಕ್ರಮ ತೆಗೆದುಕೊಂಡು ಕೆಲವರನ್ನು ಬಿಟ್ಟಿದ್ದೀರಿ Why you have selected only these two?

ಇವರಿಬ್ಬರನ್ನು ಮಾತ್ರ ನೀವು ವರ್ಗಾವಣೆ ಮಾಡಿದ್ದೀರಿ ಹಾಗಾದರೆ ಇವರು ನಿಮಗೆ ಹತ್ತಿರದವರು ಅಲ್ಲವೆ? ಬೇರೆಯವರು ನಿಮಗೆ ಹತ್ತಿರದವರೆ? ತಾವುಗಳು ಕೊಟ್ಟಿರುವ ಹೇಳಿಕೆಯು ಸಮಾಧಾನಕರವಾಗಿಲ್ಲ. ಈಗಾಗಲೇ ಇದರ ಬಗ್ಗೆ ಜ್ಯೂಡಿಶಿಯಲ್ ಎನ್‌ಕ್ವಾಯಿರಿ ಆಗಬೇಕೆಂದು ನಾವು ಕೇಳಿಕೊಂಡಿದ್ದೇವೆ. ಅದನ್ನು ತಾವು ಕೈಬಿಟ್ಟಿದ್ದೀರಿ ಎಂದು ಕಾಣುತ್ತದೆ. ಡಿವೈಎಸ್‌ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಮುಂತಾಗಿ ಎಲ್ಲ ತಪ್ಪಿತಸ್ಥರ ಮೇಲೆಯೂ ನೇರವಾದಂಥ ಆರೋಪಗಳು ಇರುವುದರಿಂದ ಅವರ ಮೇಲ ನೇರವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಅವರನ್ನು ತಾವುಗಳು ಕೂಡಲೇ ಸಸ್ಪೆಂಡ್ ಮಾಡಬೇಕು. ಆ ಬಗ್ಗೆ ಜ್ಯುಡಿಷೀಯಲ್ ಎನ್‌ಕ್ವಾಯರಿ ಮಾಡಬೇಕು. ಈ ಬೇಡಿಕೆಯನ್ನು ನಾವು ತಮ್ಮ ಮುಂದಿಟ್ಟಿದ್ದೇವೆ. ತಾವುಗಳು ಆ ಗಾಯಾಳುಗಳ ಜೊತೆ ಮಾತನಾಡಿದ ಮೇಲೂ ಸಹ ಮಾನವೀಯತೆಯ ದೃಷ್ಟಿಯಿಂದ ಆದ ಪ್ರಮಾದವನ್ನು ಒಪ್ಪಿದ್ದೀರಿ ಎಂಬ ಒಂದು ಭಾವನೆ ಬರುವ ರೀತಿಯಲ್ಲಿ ತಾವುಗಳು ಆವೊತ್ತು ಹೇಳಿದ್ದೀರಿ. ಆದರೆ ತಾವುಗಳು ಕೊಟ್ಟ ಹೇಳಿಕೆ ಮತ್ತು ಅದರಲ್ಲಿನ ಕ್ರಮದಲ್ಲಿ ತಪ್ಪಿತಸ್ಥರಿಗೆ ಯಾವುದೇ ರೀತಿ ಶಿಕ್ಷೆ ಇಲ್ಲವೆ ಅವರಿಗೆ ಸಹಾಯ ಮಾಡುವಂಥ ರೀತಿಯಲ್ಲಿ ಆ ಹೇಳಿಕೆಯು ಇದೆ. ಅದನ್ನು ಬಿಟ್ಟು ಯಾರಿಗೆ ಶಿಕ್ಷೆ ಕೊಡಬೇಕಾಗಿತ್ತೋ ಅವರಿಗೆ ಶಿಕ್ಷೆ ಕೊಡುವಂಥದ್ದನ್ನು ಹೇಳಿಲ್ಲ. ಆದ್ದರಿಂದ ಈ ಬಗ್ಗೆ ತಾವುಗಳು ದಯಮಾಡಿ ಪುನರಾಲೋಚನೆ ಮಾಡಬೇಕೆಂದು ಕೇಳಿಕೊಂಡು ಈ ಬಗ್ಗೆ ತಮ್ಮಿಂದ ನೇರವಾದ ಉತ್ತರವನ್ನು ಬಯಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಣೀಯವರೆ, ಇಲ್ಲಿ ಈ ವಿಚಾರವನ್ನು ನಾವಷ್ಟೇ ಪ್ರಸ್ತಾಪ ಮಾಡಿದ್ದರೆ, ರಾಜಕೀಯ ಕಾರಣಕ್ಕೋಸ್ಕರ ಪ್ರಸ್ತಾಪ ಮಾಡಿದ್ದರು ಎಂಬ ಭಾವನೆ ಬರಬಹುದಾಗಿತ್ತು. ಒಂದು ತಾಲ್ಲೂಕಿನಲ್ಲಿ ಪ್ರಮುಖರಾಗಿರತಕ್ಕಂಥ

ಎಲ್ಲರಿಗೂ ಆಗಿರತಕ್ಕಂಥ ಅವಮಾನ ಜನತಂತ್ರ ವಿರೋಧಿ ರೀತಿಯಲ್ಲಿ ಆಗಿದೆ. ಹಿಂದೆ ಸ್ವಾತಂತ್ಯ ಪೂರ್ವಕ್ಕೆ ಬ್ರಿಟೀಷರು ಮಾಡಿದಂಥ ಅವಮಾನಕ್ಕಿಂತ ಹೆಚ್ಚಾಗಿ ಮತ್ತು ದುಷ್ಪಪ್ರವೃತ್ತಿಯ ರೀತಿಯಲ್ಲಿ ಪೋಲೀಸರು ಅಕೃತ್ಯವನ್ನು ಪ್ರದರ್ಶಿಸಿದ್ದಾರೆ. ಅಲ್ಲಿ ನಡೆದ ದೌರ್ಜನ್ಯವನ್ನು ಮಾನ್ಯ ಮಂತ್ರಿಗಳಿಗೆ ಮನದಟ್ಟು, ಆಗುವ ಹಾಗೆ ಗಾಯಾಳುಗಳ ಬಟ್ಟೆಬಿಚ್ಚಿ ತೋರಿಸಿದ್ದೂ ಆಯಿತು. ಅವರ ಬೆನ್ನು, ತೊಡೆ, ಹೊಟ್ಟೆಯ ಮೇಲೆ ಪೋಲೀಸರ ಬೂಟಿನ ಹೆಜ್ಜೆ ಹೇಗೆ ಮೂಡಿದೆ ಎಂಬುದನ್ನು ಕೂಡ ತಾವುಗಳು ನೋಡಿದ್ದೀರಿ. ಇಷ್ಟಾದ ಮೇಲೆ ನಾಗರೀಕ ಸರಕಾರದ ಜವಾಬ್ದಾರಿ ಏನು? ಇಬ್ಬರು ಕಾನ್ಸ್‌ಟೇಬಲ್‌ಗಳನ್ನು ಟ್ರಾನ್ಸ್‌ಫರ್ ಮಾಡುತ್ತೇವೆ ಎನ್ನುವುದಾರೆ ಏನು ಅರ್ಥ? ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿ, ವಿಚಾರಣೆ ಮಾಡಿ. ಒಟ್ಟಿನಲ್ಲಿ ನ್ಯಾಯಸಿಗಬೇಕಲ್ಲವೆ? ಇದಕ್ಕಿಂತ ಬ್ರಿಟೀಷ ಸರಕಾರವೇ ಚೆನ್ನಾಗಿತ್ತು ಅನ್ನಿಸುವುದು ಬೇಡ. ಮಾನ್ಯ ಧರ್ಮಸಿಂಗ್‌ರವರ ಕೈಯಲ್ಲಾದರೂ ಧರ್ಮ ಸಿಗುತ್ತದೆ ಎಂದು ಅಂದುಕೊಂಡಿದ್ದೆವು. ಆದರೆ ತಾವು ಆ ಧರ್ಮಸಿಂಗ್‌ರಾದರೆ ಏನು ಮಾಡಬೇಕು.

We don't deserve to be legislators. Please take the matter very seriously.

ಶ್ರೀ ಆರ್. ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷಣೆಯವರೇ, ಈಗ ಇದು...

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಮಂತ್ರಿಗಳು ಅವರು ಧರ್ಮ ಸಂರಕ್ಷಣೆಗೆ ಇದ್ದಾರೆ ಎಂದು ನಮಗೆ ವಿಶ್ವಾಸ ಇತ್ತು. ಇದು ಏನು ಆಗಿದೆ, ನಮಗೂ ಅನುಭವ ಇದೆ, ಅಧಿಕಾರಿಗಳನ್ನು ಪ್ರೊಟೆಕ್ಷನ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಪ್ರಕಾರವಾಗಿ ಅವರು ಒಂದು ಸ್ಟೇಟ್‌ಮೆಂಟನ್ನು ಮಾಡಿ ಕೊಟ್ಟಿದ್ದಾರೆ. ಅದನ್ನು ತಾವು ಓದಿದ್ದೀರಿ. ವಿಕೆಂದರೆ ತಾವು ಮೊನ್ನೆ ಹೇಳಿದಾಗ ನಮಗೆ ವಿಶ್ವಾಸವಿತ್ತು. ಮಂತ್ರಿಗಳು ಡೆಫನೇಟ್ ಆಗಿ ಕ್ರಮ ತೆಗೆದುಕೊಳ್ಳುತ್ತಾರೆ, ಸಸ್ಪೆಂಡ್ ಮಾಡುತ್ತಾರೆ ಎನ್ನತಕ್ಕಂಥ ಒಂದು ವಿಶ್ವಾಸ ಆವತ್ತು ಬಂದಿತ್ತು. ಎನ್‌ಕ್ವೈರಿಯನ್ನು ಮಾಡಿಸುತ್ತೇನೆ ಎಂದು ಹೇಳಿದ್ದರು. ಆದರೆ ಇವತ್ತು ಸ್ಟೇಟ್‌ಮೆಂಟನ್ನು ನೋಡಿದ ನಂತರ ಏನೋ ತಮ್ಮಲ್ಲಿ ಧರ್ಮ ಹೋಗಿಬಿಟ್ಟಿದೆ ಎಂದು ಕಾಣಿಸುತ್ತದೆ. ಆದುದರಿಂದ ತಮ್ಮಲ್ಲಿ ಪುನಃ ವಿನಂತಿ ಮಾಡಿಕೊಳ್ಳುತ್ತಿದ್ದೇವೆ, ತಾವು ಇದರ ಬಗ್ಗೆ ಕ್ರಮ ತೆಗೆದುಕೊಂಡು ಯಾರು ತಪ್ಪಿತಸ್ಥರು ಇದ್ದಾರೆ, ಅವರನ್ನು ಸಸ್ಪೆಂಡ್ ಮಾಡಬೇಕು. ಅವರ ಮೇಲೆ ಡಿಸಿಪ್ಲಿನರಿ ಆಕ್ಷನನ್ನು ತೆಗೆದುಕೊಳ್ಳಬೇಕು. ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿ ಏನು ಮಾಡುವುದಕ್ಕಾಗುತ್ತದೆ? ಯಾರ ಮೇಲೆ ಅಟ್ಯಾಕ್ ಮಾಡಿದ್ದಾರೆ, ಅವರೇ ಎನ್‌ಕ್ವೈರಿಯನ್ನು ಮಾಡುವುದು. ಅವರೇ ಜಡ್ಜ್ ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿಯಲ್ಲ. ಅದರ ಸಲುವಾಗಿ ತಾವು ಜ್ಯುಡಿಶಿಯಲ್ ಎನ್‌ಕ್ವೈರಿಯನ್ನು ಮಾಡಿದರೆ ಬಹಳ ಒಳ್ಳೆಯದು.

ಉಪಾಧ್ಯಕ್ಷಣೆಯವರು : ಆಯಿತು.

ಶ್ರೀ ಧರ್ಮಸಿಂಗ್ : ಇದು ಬಹಳ ಸಲ ಅಂದರೆ ಮೂರು-ನಾಲ್ಕು ಸಲ ಪ್ರಸ್ತಾಪವಾಗಿದೆ. ಮತ್ತು ಕಳೆದ ಸೋಮವಾರದ ದಿವಸ ಕೂಡಾ ಅಲ್ಲಿ ಯಾರು ಹೊಡೆತಕ್ಕೆ ಒಳಪಟ್ಟಿದ್ದರೋ ಅವರು ಕೂಡಾ ಇಲ್ಲಿ ಬಂದು ವಿರೋಧ ಪಕ್ಷದ ನಾಯಕರನ್ನೂ ಕಂಡಿದ್ದರು. ಮತ್ತು ಮಾನ್ಯೇ ಮುಖ್ಯಮಂತ್ರಿಗಳನ್ನು ಕೂಡಾ ನೋಡಿದ್ದರು. ನಾನು ಕೂಡಾ ನನ್ನ ಛೇಂಬರ್‌ಗೆ ಅವರನ್ನು ಖುದ್ದಾಗಿ ಕರೆಸಿದ್ದೆ. ಮಾನ್ಯ ಸಿಂಧ್ಯಾರವರು ಮತ್ತು ಇತರ ವಿರೋಧ ಪಕ್ಷದ ನಾಯಕರು ಕೂಡಾ ಬಂದಿದ್ದನ್ನು ನೋಡಿದ್ದೇನೆ. ಮತ್ತು ಮಾನ್ಯ ಚಂದ್ರೇಗೌಡರು..

ಶ್ರೀ ಡಿ.ಬಿ. ಚಂದ್ರೇಗೌಡರು : ನಿಮಗೆ ಸಂತೋಷವಾಗಿದೆಯೇ?

ಶ್ರೀ ಆರ್. ಧರ್ಮಸಿಂಗ್ : ಅದಕ್ಕೆ ನಾನು ಡಿನೈ ಮಾಡುತ್ತಿಲ್ಲ. ಎಕ್ಸಸ್ ಏನಾಗಿದೆ ಎನ್ನುವುದನ್ನು ನಾನು ಈ ಸಭೆಯಲ್ಲಿ ಹೇಳುತ್ತಿಲ್ಲ. ಅಧಿಕಾರಿಗಳಿಗೆ ಯಾವ ರೀತಿಯಲ್ಲಿ ಪೇಳಿದ್ದೇನೆ ಎಂದು ನಾನು ಪ್ರಸ್ತಾಪ ಮಾಡಲಿಲ್ಲ. ನಾನೇ ಖುದ್ದಾಗಿ ನೋಡಿದ್ದೇನೆ. They are also public representatives. ಯಾರು ಹೊಡೆತಕ್ಕೆ ಒಳಪಟ್ಟಿದ್ದರೋ ಅವರನ್ನು ಛೇಂಬರ್ಸ್‌ಗೆ ಕರೆಸಿ ಒಂದು ತಾಸುಗಳ ಕಾಲ ಅವರೊಡನೆ ಕುಳಿತ್ತು ನಾನೇ ಖುದ್ದಾಗಿ ನೋಡಿದ್ದೇನೆ. ಅದರ ಬಗ್ಗೆ ಏನೂ ಇಲ್ಲ. ಮೊದಲು ಪ್ರಸ್ತಾಪವಾದಾಗ ಜಿಲ್ಲಾಧಿಕಾರಿಗಳಿಗೆ ವಿಚಾರಣೆ ಮಾಡತಕ್ಕಂಥ ರೀತಿಯಲ್ಲಿ ಈಗಾಗಲೇ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದ್ದೇನೆ. ಅವರೂ ಕೂಡಾ ವಿಚಾರಣೆ ಮಾಡುತ್ತಾರೆ. ಆ ರೀತಿ ವಿಚಾರಣೆ ಮಾಡತಕ್ಕಂಥ ಕಾಲದಲ್ಲಿ ಅವರುಗಳು ಅಲ್ಲಿಯೇ ಇದ್ದರೆ ನಿಷ್ಪಕ್ಷಪಾತವಾಗಿ ವಿಚಾರಣೆ ಆಗುವುದಿಲ್ಲ ಎನ್ನತಕ್ಕಂಥದ್ದನ್ನು ಪರಿಗಣಿಸಿ, ಈಗಾಗಲೇ ಅಲ್ಲಿಂದ ಅವರನ್ನು ಸ್ಥಳಾಂತರ ಮಾಡಿದ್ದೇನೆ. ಯಾವಾಗಲಾದರೂ ಕೂಡ ಅನಾಹುತವಾದರೆ, ಘಟನೆಯಾದರೆ ಯಾರು ಪೋಲೀಸ್ ಅಧಿಕಾರಿಗಳ ಮೇಲೆ ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಮತ್ತು ಎಲ್ಲಾ ಸದಸ್ಯರು ಕೂಡಾ ಅಪಾದನೆಯನ್ನು ಮಾಡಿದ ಮೇಲೆ ಆ ಅಧಿಕಾರಿಗಳನ್ನು ಸ್ಥಳಾಂತರ ಮಾಡಿದರೆ ಅಧಿಕಾರಿಗಳ ಮೇಲೆ ವಿಶ್ವಾಸ ಇಲ್ಲ ಮಾಡಿದ್ದಾರೆ ಎನ್ನತಕ್ಕಂಥದ್ದು ಕೂಡಾ ತೋರಿಸಿ ಕೊಡುತ್ತದೆ. That will also create confidence. ಆಗುತ್ತದೆ, ಇಲ್ಲ ಎಂದು ಅಲ್ಲ. ಏಕೆಂದರೆ ವಿಚಾರಣೆಯನ್ನು ಮಾಡತಕ್ಕಂಥ ರೀತಿಯಲ್ಲಿ ಈಗಾಗಲೇ ಆಜ್ಞೆಯನ್ನು ಮಾಡಿದ್ದೇನೆ. ಅದಕ್ಕಾಗಿ ನಾವು ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದ್ದೇವೆ. ರಿಪೋರ್ಟ್ ಬಂದ ಮೇಲೆ ಡೆಫನೇಟ್ ಆಗಿ ಕ್ರಮ ತೆಗೆದುಕೊಳ್ಳುತ್ತೇನೆ. ನಾವು ನಮ್ಮ ಮೇಲೆ ವಿಶ್ವಾಸವನ್ನು ಇಡಿ. ಅಲ್ಲಿ ಲೋಕಲ್‌ನಲ್ಲಿ ಏನು ಪೋಲೀಸ್ ಅಧಿಕಾರಿಗಳು ಹೊಡೆದಿದ್ದಾರೆ, ಮತ್ತು ಪೋಲೀಸ್ ಸ್ಟೇಷನ್‌ಗೆ ಹೋದರೂ ಕೂಡಾ ಮಾತನಾಡಿಲ್ಲ ಎಂದು ಏನು ಹೇಳಿದ್ದೀರಿ, ಅದನ್ನು ನಾನೇ ಖುದ್ದಾಗಿ ಕೂಡಾ ಪರಿಶೀಲನೆ ಮಾಡಿದ್ದೇನೆ. ಅದು ನನ್ನ ಮನಸ್ಸಿಗೂ ಕೂಡಾ ಬಂದಿದೆ. ಅದಕ್ಕೆ ನಾವು ಅಲ್ಲಿಂದ ಅವರನ್ನು ವರ್ಗಾವಣೆ ಮಾಡುತ್ತಿದ್ದೇನೆ. ಅಲ್ಲಿ ನಿಷ್ಪಕ್ಷಪಾತವಾಗಿ ವಿಚಾರಣೆ ಕೂಡಾ ಆಗುತ್ತದೆ. ವರದಿ ಕೂಡಾ ಅಲ್ಲಿಂದ ಬರುತ್ತದೆ. ಇದರ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ಕೂಡಾ ಹೇಳಿದ್ದೇನೆ. ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಹೇಳಿದ್ದೇನೆ. ಮೊನ್ನೆ ಡಿ.ಜಿ. ಅವರು ಕೂಡಾ ಹೋಗಿ ಬಂದಿದ್ದಾರೆ. ಡಿ.ಐ.ಜಿ. ಅವರನ್ನು ಡಿಪ್ಯೂಟ್ ಮಾಡಿದ್ದೇವೆ. ಅದಕ್ಕಾಗಿ ನಮ್ಮ ಮೇಲೆ ನಾವು ಭರವಸೆಯನ್ನು ಇಡಿ. ಮತ್ತು ಸರ್ಕಾರ ಅದರ ಬಗ್ಗೆ ತೀವ್ರತರವಾದ ಕ್ರಮವನ್ನು ತೆಗೆದು ಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ನಿಮಗೆ ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷೆಣಿಯವರೇ, ಕೆಲವು ವಿಚಾರಗಳನ್ನು ನಾವು ಸದನದಲ್ಲಿ ಮಾತನಾಡಲಾರದಂಥ ಭಾಷೆಯನ್ನು ಅಲ್ಲಿ ಬಳಸಿದ್ದಾರೆ. ರಾತ್ರಿ ಒಂದು ಗಂಟೆಗೆ ಡಿ.ವೈ.ಎಸ್.ಪಿ. ಹೋಗಿ ಮನೆಯಲ್ಲಿ ಹೆಂಗಸರಿಗೆ ಕೀಳಾದ ಭಾಷೆಯನ್ನು ಬಳಸಿದ್ದಾರೆ. ಪೋಲೀಸರ ಭಾಷೆ ಇದೆಯೆಲ್ಲಾ ಅದನ್ನೂ ಕೂಡಾ ಅಲ್ಲಿ ಬಳಸಿರತಕ್ಕಂಥದ್ದು ನಡೆದಿದೆ.

ಉಪಾಧ್ಯಕ್ಷೆಣಿಯವರು : ಈಗ ಸರ್ಕಾರದಿಂದ ಉತ್ತರ ಬಂದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಜನತಂತ್ರದ ವ್ಯವಸ್ಥೆಯೊಳಗಡೆ ಇಂಥ ಅನಾಗರೀಕ ವರ್ತನೆಯನ್ನು ಸಹಿಸಿಕೊಳ್ಳುವುದು ನಾವು ಇಲ್ಲಿ ಪ್ರತಿನಿಧಿಗಳಾಗಿ ಕೆಲಸ ಮಾಡುವುದಕ್ಕೆ ಮತ್ತು ಜನರ ಪ್ರತಿನಿಧಿಗಳು ಎಂದು ಹೇಳಿಕೊಳ್ಳುವುದಕ್ಕೂ ಯೋಗ್ಯರು ಆಗುವುದಿಲ್ಲ.

ಎಲ್ಲಿಯವರೆಗೆ ಅವರ ಹಿತವನ್ನು, ಹಿತ ಹಾಳಾಗಿ ಹೋಗಲಿ, ಕನಿಷ್ಟ ಪ್ರಮಾಣದ ಅವರಿಗೆ ರಕ್ಷಣೆ ಸವಲತ್ತುಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದರೆ ಇಂಥ ಅನಾಗರೀಕ ವರ್ತನೆಯನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಜನತಾದಳದ ಎಲ್ಲಾ ಸದಸ್ಯರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಬೆಳಿಗ್ಗೆ ಇನ್ನೊಂದು ಸ್ಟೇಟ್‌ಮೆಂಟನ್ನು ಕೊಡುತ್ತೇವೆಂದು ತಾವು ಹೇಳಿದ್ದೀರಿ. ಮಾನ್ಯ ಕೆ.ಹೆಚ್. ರಂಗನಾಥ್ ಅವರು ಎತ್ತಿದಂಥ ವಿಷಯಕ್ಕೆ ತಾವು ಸ್ಟೇಟ್‌ಮೆಂಟ್‌ನ್ನು ಕೊಡುತ್ತೇನೆಂದು ಹೇಳಿದ್ದೀರಿ.

ಮಂತ್ರಿಗಳವರಿಂದ ಹೇಳಿಕೆ.

ರಾಜ್ಯದಲ್ಲಿ ಸಿ.ಒ.ಡಿ. ತನಿಖೆ ಅನುಮತಿ ಹಾಪಸ್ಸು ಪಡೆದಿರುವ ಬಗ್ಗೆ

ಶ್ರೀ ಧರ್ಮಸಿಂಗ್ (ಮಾನ್ಯ ಗೃಹ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಣೆಯವರೇ, ನಿನ್ನೆ ಮುಂಜಾನೆ ನಮ್ಮ ಹಿರಿಯ ಸದಸ್ಯರಾದ ಕೆ.ಹೆಚ್. ರಂಗನಾಥ್‌ರವರು ಬೆಳಿಗ್ಗೆ ರಾಜೀವ್‌ಗಾಂಧಿಯವರ ಹತ್ಯೆಯ ಒಂದು ಹಿನ್ನಲೆಯಲ್ಲಿ ಏನು ಒಂದು ತನಿಖೆ ನಡೆಯುತ್ತಿತ್ತು, ಆ ತನಿಖೆಯ ಬಗ್ಗೆ ಸಿಬಿಐಗೆ ವಿತ್‌ಡ್ರಾ ಮಾಡಿದ್ದಾರೆ. ಅದಕ್ಕಾಗಿ ತನಿಖೆ ಆಗುತ್ತಿಲ್ಲ ಎನ್ನತಕ್ಕಂಥ ಮಾತನ್ನು ಕೂಡಾ ಪ್ರಸ್ತಾಪ ಮಾಡಿದ್ದಾರೆ. ನಾನು ಮುಂಜಾನೆ ನ್ಯಾಷನಲ್ ಇಂಟೆಗ್ರೇಷನ್ ಕಮಿಟಿಯಲ್ಲಿ ಇದ್ದಕಾರಣ ಬರಲಿಕ್ಕೆ ಆಗಲಿಲ್ಲ, ತಮ್ಮ ಅಪ್ಪಣೆಯನ್ನು ಪಡೆದು ಈ ಒಂದು ಸ್ಟೇಟ್‌ಮೆಂಟನ್ನು ಈ ಸಭೆಯಲ್ಲಿ ಇಡುತ್ತಿದ್ದೇನೆ.

The attention of Government has been drawn to press reports which have appeared in the Samyukta Karnataka and the Indian Express concering alleged withdrawl of consent to the CBI for investigation of offences in Karnataka State. It is alleged that this withdrawl of consent has handicapped the CBI in the matter of investigation of offences punishable under the Terrorists and Disruptive Activities (Prevention) Act, 1987 and the Rules made There under;-

At the outset let me clarify that under;-

(a) the Terrorists and Disruptive Activities(Prevention) Act, 1987;

And

(b) the Unlawful Activities (Prevention) Act, 1967;

the CBI etc., never had any jurisdiction at any time until August, 1991 to conduct any investigation inside Karnataka State. The earlier existing investigative jurisdicton had made no reference to these two Acts. This was a serious lacuna detected by the Government for the first time in July 1991. In addition, the earlier existing powers for investigation by the CBI etc., permitted only specific offences under some enactments to be investigated by the central Agencies. Our Government Consider it proper to give the Central investigating Agencies a wide range of powers to investigate all types of